## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲ ಪ್ರಶ್ನೆ ಸಂಖ್ಯೆ: (342)
2. ಸದಸ್ಯರ ಹೆಸರು: ಶ್ರೀಮತಿ ಎಸ್.ವೀಣ ಅಚ್ಚಯ್ಯ
3. ಉತ್ತರಿಸುವ ದಿನಾಕ: 15.12.2021
4. ಉತ್ತರಿಸುವ ಸಚಿವರು ಕಂದಾಯ ಸಚಿವರು
5.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ವಿದೇಶಿ ಪ್ರಜೆಗಳು ಕರ್ನಾಟಕದಲ್ಲಿ ಕೃಷಿ ಜಮೀನು ಖರೀದಿಸಲು ಅವಕಾಶವಿದೆಯೇ: ಹಾಗಿದ್ದಲ್ಲಿ, ಅನುಸರಿಸಬೇಕಾದ ವಿಧಾನ ನಿಯಮಗಳೇನು (ಸಂಪೂರ್ಣ ವಿವರ ನೀಡುವುದು.) | ವಿದೇಶಿ ಪ್ರಜೆಯು ಭಾರತದಲ್ಲಿ ವಾಸುತ್ತಿದ್ದಲ್ಲಿ ಸಂಬಂಧಿಸಿದ ರಾಜ್ಯ ಸರ್ಕಾರದಿಂದ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮತಿ ಪಡೆದು ಖರೀದಿಸಲು ಅವಕಾಶವಿರುತ್ತದೆ.(FEMA ಕಾಯ್ದೆಯಂತೆ) |
| ಆ | ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕು, ಹುದಿಕೇರಿ ಹೋಬಳಿಯ ತೆರಲು ಗ್ರಾಮದಲ್ಲಿ. ವಿದೇಶಿ ಪ್ರಜೆಗಳು ಕೃಷಿ ಜಮೀನನ್ನು ಖರೀದಿಸಿದ್ದಾರಯೇ: ಹಾಗೂ ಅವರ ಹೆಸರಿಗೆ ಖಾತೆಯಾಗಿದೆಯೇ (ಸಂಪೂರ್ಣ ವಿವರ ನೀಡುವುದು) | ಉಪನೋಂದಣಾಧಿಕಾರಿಯವರ ಕಛೇರಿ, ಪೊನ್ನಂಪೇಟೆ, ಇವರು ವಿದೇಶಿ ಪ್ರಜೆಗಳು, ಕೃಷಿ ಜಮೀನುಗಳನ್ನು ಖರೀದಿಸಿದ ಮಾಹಿತಿ ಕಂಡುಬಂದಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.<br>ಉಪನೋಂದಣಾಧಿಕಾರಿ, ಪೊನ್ನಂಪೇಟೆ, ಕೊಡಗು ಜಿಲ್ಲೆ ಇವರ ಕಛೇರಿಯಲ್ಲಿ ನೋಂದಾಯಿಸಲಾದ ದಸ್ತಾವೇಜು ಸಂಖ್ಯೆ:521/97-98, ದಿನಾಂಕ:26.09.1997 ರಲ್ಲಿ ತೆರಲು ಗ್ರಾಮದಲ್ಲಿ ಶ್ರೀ ಅನಿಲ್ ಕುಮಾರ್ ಮಲ್ಹೋತ್ರ ಮತ್ತು ಅವರ ಪತ್ನಿ ಪಮೇಲಾ ಗಾಲೆ ಮಲ್ಹೋತ್ರ ರವರು ಕೃಷಿ ಭೂಮಿಯನ್ನು ಖರೀದಿಸಿರುವುದು ದಾಖಲಾಗಿರುತ್ತದೆ. ನೋಂದಾಯಿತ ದಾಸ್ತುವೇಜುಗಳಲ್ಲಿ ಶ್ರೀ ಅನಿಲ್ ಕುಮಾರ್ ಮಲ್ಹೋತ್ರ ಮತ್ತು ಅವರ ಪತ್ನಿ ಪಮೇಲಾ ಗಾಲೆ ಮಲ್ಹೋತ್ರ ರವರು ತಾವು ತೆರಲು ಗ್ರಾಮ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ, ಇಲ್ಲಿ ನಿವಾಸಿಗಳೆಂದು ದಾಖಲಿಸಿಕೊಂಡಿರುವುದು ಕಂಡುಬರುತ್ತದೆ.<br>ನೊಂದಾಯಿತ ದಸ್ತಾವೇಜಿನಂತೆ ಜೆ-ನಮೂನೆಯು ತಹಶೀಲ್ದಾರ್ ಕಛೇರಿಯಲ್ಲಿ ಸ್ವೀಕೃತವಾಗಿದ್ದು, ಕರ್ನಾಟಕ ಭೂ ಸುಧಾರಣಾ ಕಾಯ್ದೆ 1964ರ ಸೆಕ್ಷನ್ 128 ರಡಿಯಲ್ಲಿ ಆಕ್ಷೇಪಣೆಗಳು ಸ್ವೀಕೃತವಾಗದ ಕಾರಣ ಮ್ಯುಟೇಷನ್ ಅಂಗೀಕರಿಸಲಾಗಿದೆ. |

| | | |
|---|---|---|
| ಇ | ಸದರಿ ಜಮೀನು ಖರೀದಿ ಹಾಗೂ ಖಾತೆಯಾಗಿರುವುದು ನಿಯಮಾನುಸಾರವಾಗಿವೆಯೇ: ನಿಯಮಾನುಸಾರವಾಗಿರದಿದ್ದಲ್ಲಿ, ಸದರಿ ಪ್ರಕರಣದಲ್ಲಿ ಭಾಗಿಯಾಗಿ ಅಕ್ರಮ ಎಸಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ. | ಸದರಿ ಖಾತೆ ವರ್ಗಾವಣೆಯು ಕರ್ನಾಟಕ ಭೂಸುಧಾರಣಾ ಕಾಯ್ದೆ 1964ರ ಅನುಸಾರ ಕ್ರಮಬದ್ಧವಾಗಿರುತ್ತದೆ. |
| ಈ | ಸದರಿ ಜಮೀನು ಖರೀದಿ ನಿಯಮಾನುಸಾರವಾಗಿರದಿದ್ದಲ್ಲಿ, ಸದರಿ ಖರೀದಿ ಪ್ರಕ್ರಿಯೆಯನ್ನು ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ. | ಅನ್ವಯಿಸುವುದಿಲ್ಲ. |

ಕಂಇ 32 ಎಲ್‌ಆರ್‌ಎಸ್ 2021

(ಆರ್.ಅಶೋಕ)
ಕಂದಾಯ ಸಚಿವರು